CW : 13
PW : 13

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

# **CC No.**1188/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೇಶ್ ಕೆ. ಆರ್. |
| ತಂದೆಯ ಹೆಸರು | : | ರಾಮ ನಾಯ್ಕ |
| ಪ್ರಾಯ | : | 42 |
| ಉದ್ಯೋಗ | : | ವಾಹನ ಚಾಲನಾ ತರಬೇತಿ |
| ವಾಸಸ್ಥಳ | : | ಬನ್ನೂರು |
| ದಿನಾಂಕಃ 24.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ಆರೋಪಿತರು ಮತ್ತು ಚಾಸಾ12 ಗೊತ್ತಿಲ್ಲ. ಸಾಕ್ಷಿಗೆ 6 ಮಹಜರುಗಳನ್ನು ತೋರಿಸಲಾಗಿ, ತಮ್ಮ ಸಹಿಯನ್ನು ಗುರುತಿಸಿದ್ದು , ಸದರಿ ಸೊತ್ತು ಸ್ವಾಧೀನತಾ ಮಹಜರುಗಳನ್ನು ಈಗಾಗಲೇ ಕ್ರಮವಾಗಿ **ನಿಪಿ34 ರಿಂದ 39** ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಹಿಯನ್ನು **ನಿಪಿ34(ಬಿ) ಯಿಂದ 39(ಬಿ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವುದೋ ಕಚೇರಿಯಲ್ಲಿ 5 ವರ್ಷದ ಹಿಂದೆ ಹಾಕಿರುತ್ತೇನೆ. ಯಾವ ವಿಚಾರದ ಸಂಬಂಧ ಹಾಕಿರುತ್ತೇನೆ ಎಂದು ಗೊತ್ತಿಲ್ಲ. ನನಗೆ ಆರೋಪಿ ಗೊತ್ತಿಲ್ಲ. ಆರೋಪಿಯಿಂದ ನನ್ನ ಸಮಕ್ಷಮ ಯಾವುದೇ ಸೊತ್ತು ಅಥವಾ ದಾಖಲಾತಿಯನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ನಿಪಿ34 ರಿಂದ 39 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ18 ರಿಂದ 23 ರಲ್ಲಿರುವ ಸಹಿಗಳನ್ನು ನೋಡಿ

ಗುರುತಿಸಿದ್ದು, ಅವುಗಳನ್ನು **ನಿಪಿ18(ಎ) ಯಿಂದ 23(ಎ)** ಎಂದು ಗುರುತಿಸಲಾಯಿತು. ನಿಪಿ-4 ರಿಂದ 8 ರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ನಿಪಿ4(ಎ) ಯಿಂದ 8(ಎ)** ಎಂದು ಗುರುತಿಸಲಾಯಿತು. ಆರ್ 1 ರಿಂದ 18, ಆರ್ 55 ರಿಂದ 60 ಎಂದು ಬರೆದಿರುವ ದಾಖಲಾತಿಗಳಲ್ಲಿ ಸಾಕ್ಷಿಯು ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ **ನಿಪಿ-42 ರಿಂದ 66** ಎಂದು ಸಾಕ್ಷಿಯ ಸಹಿಗಳನ್ನು **ನಿಪಿ-42(ಎ) ಯಿಂದ 66(ಎ)** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿಯನ್ನು ಸರ್ಕಾರಿ ಸಹಾಯಕ ಅಭಿಯೋಜಕರವರು ಕೋರಿಕೊಂಡಿದ್ದು, ಅನುಮತಿ ನೀಡಿಲಾಯಿತು)**

**ಪಾಟಿಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ25.05.2017 ರಂದು 1ನೇ ಆರೋಪಿಯ ಸಮಕ್ಷಮ ಪುತ್ತೂರು ನಗರ ಠಾಣೆಯಲ್ಲಿ ತನಿಖಾಧಿಕಾರಿಯ ನನ್ನ ಹಾಗೂ ಚಾಸಾ12 ರವರ ಸಮಕ್ಷಮ ಆರೋಪಿ ಹಾಜರುಪಡಿಸಿದ ಬಿಳಿ ಕಾಗದದಲ್ಲಿ ಆರೋಪಿ ರಫೀಕ್ ಎಂಬುವವರಿಂದ ಸುರೇಶ್ ಕುಮಾರ್ ಎಂಬುದಾಗಿ ಪಡೆಯಲಾದ ತಲಾ 7 ಸಹಿಗಳ ಕೋರಿಕೆ ಕೈಬರಹಗಳು 6, ಆರೋಪಿಯ ಕೈಯಿಂದ ಹಸನ್ ಎಂಬುದಾಗಿ ಪಡೆಯಲಾದ 7 ಸಹಿಗಳ ಕೋರಿಕೆ ಕೈಬರಹಗಳು , ಆರೋಪಿಯ ಕೈಯಿಂದ ಆತನಿಂದ 7 ಸಹಿಗಳನ್ನು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗೆ ನಿಪಿ34 ರಂತೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಅದೇ ದಿನ 4 ರಿಂದ 5 ಗಂಟೆಯವರೆಗೆ 1 ನೇ ಆರೋಪಿಯಿಂದ ಬಿಳಿ ಕಾಗದದಲ್ಲಿ KA50N9164 ಎಂಬ ವಾಹನದ 29, 30 ಪಾರ್ಮ್ ನ್ನು ಪವಿತ್ರಾ ಎಂಬ ಹೆಸರಿನಿಂದ ಸುರೇಶ್ ಎಂಬ ಹೆಸರಿಗೆ ದಿಃ05.09.2013 ರಂದು ಭರ್ತಿ ಮಾಡಿಕೊಟ್ಟ ಶರತ್ ಕುಮಾರ್ ಎಂಬುವವರ ಕೋರಿಕೆ ಕೈಬರಹದ A-Z

ವರೆಗೆ 6 ಹಾಳೆಗಳಲ್ಲಿ ಪಡೆದ ಇಂಗ್ಲೀಷ ಕೈಬರಹಗಳನ್ನು, KA50N9164 ವಾಹನದ ಎಂಬ ವಾಹನದ 29, 30 ಪಾರ್ಮ್ ನ್ನು ಸುರೇಶ್ ಕುಮಾರ್ ಎಂಬ ಹೆಸರಿನಿಂದ ಸೈಯದ್ ಮಹಮ್ಮದ್ ಹಸನ್ ಎಂಬ ಹೆಸರಿಗೆ ದಿಃ15.03.2014 ರಂದು ಭರ್ತಿ ಮಾಡಿಕೊಟ್ಟ ಪ್ರಜೀತ್ ಕುಮಾರ್ ಎಂಬುವವರ ಕೋರಿಕೆ ಕೈಬರಹದ A-Z ವರೆಗೆ 6 ಹಾಳೆಗಳಲ್ಲಿ ಪಡೆದ ಇಂಗ್ಲೀಷ ಕೈಬರಹಗಳನ್ನು ಸ್ವೀಕರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ35 ಸದರಿ ದಾಖಲಾತಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಅದೇ ದಿನ ಸಂಜೆಃ6 ರಿಂದ 7 ಗಂಟೆಯವರೆಗೆ 2ನೇ ಆರೋಪಿಯಿಂದ ನನ್ನ ಹಾಗೂ ಚಾಸಾ12 ರವರ ಸಮಕ್ಷಮ ಆರೋಪಿತನಿಂದ ಕೊಾರಿಕೆ ಕೈಬರಹದ ಸಹಿಗಳಿರುವ 6 ಪ್ರತಿಗಳನ್ನು ನಿಪಿ36 ರಂತೆ ಸ್ವೀರಿಸಿರುತ್ತಾರೆ ಎಂದರೆ ಸರಿಯಲ್ಲ.

ದಿಃ14.07.2017 ರಂದು ನನ್ನ ಹಾಗೂ ಚಾಸಾ12 ರವರ ಸಮಕ್ಷಮ ಪುತ್ತೂರು ನಗರ ಠಾಣೆಯಲ್ಲಿ RTO ಕಚೇರಿಯಿಂದ ಕಳುಹಿಸಿಕೊಟ್ಟ 25 ದಾಖಲಾತಿಗಳನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಸ್ವೀಕರಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದರಂತೆ ನಿಪಿ37 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ23.07.2017 ರಂದು ನನ್ನ ಹಾಗೂ ಚಾಸಾ12 ರವರ ಸಮಕ್ಷಮ ಬೆಳಿಗ್ಗೆ 9.30 ರಿಂದ 10.15 ರವರೆಗೆ ಪುತ್ತೂರು ನಗರ ಪೋಲೀಸ್ ಠಾಣೆಯಲ್ಲಿ 2ನೇ ಆರೋಪಿಯಿಂದ ಬಿ ಖಾತೆ ತೆರೆಯುವ ಸಮಯ ಸಿಂಡಿಕೇಟ್ ಬ್ಯಾಂಕ್ ಗೆ ಸಲ್ಲಿಸಿದ ಅರ್ಜಿ ಪ್ರಪ್ರತ್ರ-1 ನ್ನು, ಸಿಂಡಿಕೇಟ್ ಬ್ಯಾಂಕ್ ನಿಂದ ಪತ್ರ ನಂ.1 ರಲ್ಲಿ 2ನೇ ಆರೋಪಿಯ ಒಪ್ಪಿತ ಸಹಿ-1, ನಿಪಿ38 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 09.04.2018 ರಂದು, ನನ್ನ ಹಾಗೂ ಚಾಸಾ12 ರವರ ಸಮಕ್ಷಮ ಬೆಳಿಗ್ಗೆ 9 ರಿಂದ 10.15 ರವರೆಗೆ ಪುತ್ತೂರು ನಗರ ಠಾಣೆಯಲ್ಲಿ ಪುತ್ತೂರು ಸಾರಿಗ ಕಚೇರಿಯಿಂದ ಕಳುಹಿಸಿಕೊಟ್ಟ ಪಾರ್ಮ್ ನಂ.30 KA19MG99 ರ ಮಾಲಿಕತ್ವ ವರ್ಗಾವಣೆ ಮಾಡುವ ಕುರಿತು ನಜೀರ್ ಎಂಬುವವರಿಂದ ತಂಗಚ್ಚನ್

CW : 13
PW : 13

ಎಂಬುವವರಿಗೆ ದಿಃ23.11.2012 ರಂದು ವಾಹನ ವರ್ಗಾವಣೆ ಮಾಡುವಾಗ ನೀಡಿದ ಪ್ರಪತ್ರ-1, ಪಾರ್ಮ್ ನಂ.30 KA19EA112 ಮಾಲಿಕತ್ವ ವರ್ಗಾವಣೆ ಮಾಡುವ ಕುರಿತು ಗಂಗಾಧರ್ ಎಂಬುವವರಿಂದ ಬಸವರಾಜ್ ಎಂಬುವವರಿಗೆ ದಿಃ26.08.2010 ರಂದು ದ್ವಿಚಕ್ರ ವರ್ಗಾವಣೆ ಮಾಡುವಾಗ ನೀಡಿದ ಪ್ರಪತ್ರ, ಪಾರ್ಮ್ ನಂಃ29 ರಂತೆ ದಿಃ26.09.2008 ರಂದು KA19EA112 ಗಂಗಾಧರ್ ಎಂಬುವವರಿಂದ ಬಸವರಾಜ್ ಎಂಬುವವರಿಗೆ ದ್ವಿಚಕ್ರ ವರ್ಗಾವಣೆ ಮಾಡುವಾಗ ನೀಡಿದ ಪ್ರಪತ್ರ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಿಪಿ39 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಆರೋಪಿಯಿಂದ ನಮ್ಮ ಸಮಕ್ಷಮ ವಶಪಡಿಸಿಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು ಆರೋಪಿಗಳ ಪರ ವಕೀಲರಿಂದಃ**ಇಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು